ಹೋಬಳಿಗಳಲ್ಲಿ ಬೆಳೆ experiment ಮಾಡಿದಾಗ ಕಡಿಮೆ ಬಂದಿದೆ. ಹಿಂದೆ ಎರಡು ಹೋಬಳಿಗಳಲ್ಲಿ ಬೆಳೆಚೆನ್ನಾಗಿ ಬಂದಿದೆ. ಇಷ್ಟು ಈ ಬೆಳೆಯ experiment ನಿಂದ ಗೊತ್ತಾದುದು.

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಯಾವ ತಾಲ್ಲೂಕುಗಳಿಗೆ ನಾವು ಘೋಷಣೆ ಮಾಡಿದ್ದೇವೆ ಆ ರೀತಿಯಲ್ಲಿ ಇಡೀ ತಾಲ್ಲೂಕಿಗೆ ಅದು ಅನ್ವಯವಾಗುತ್ತದೆ. ಆದರೆ, ಕೃಷಿ ಸಚಿವರಾದ ಮಾನ್ಯ ರವೀಂದ್ರನಾಥ್‌ರವರು ಹೇಳಿದ ಹಾಗೆ ಆ ಹೋಬಳಿಯಲ್ಲಿ ಜಾಸ್ತಿ ಎಲ್ಲಿ affected ಆಗಿದೆ, ಎಲ್ಲಿ ಕಡಿಮೆಯಾಗಿದೆ ಹಾಗೂ ತೊಂದರೆಯಾಗಿದೆ ಎಂಬುದನ್ನು ಆ ಕಾಲಂನಲ್ಲಿ ತೋರಿಸಲಾಗಿದೆ. ಅದನ್ನೇ ಮಾನದಂಡ ಮಾಡಿಕೊಳ್ಳಬೇಕು ಎಂದು ಸರ್ಕಾರಕ್ಕೆ ತಿಳಿಸಿಲ್ಲ. ಬ್ಯಾಂಕ್‌ಗಳಿಗೆ, ವಿಮೆ ಸಂಸ್ಥೆಗಳಿಗೆ ಗೊಂದಲವಾಗಿದೆ. ಇವತ್ತು ಆ ಸುತ್ತೋಲೆಯನ್ನು ಕ್ಲಿಯರ್ ಮಾಡಿ ತಾಲ್ಲೂಕನ್ನು consider ಮಾಡಿ ಯಾವ್ಯಾವ ರೈತರಿಗೆ ತೊಂದರೆಯಾಗಿದೆ ಹಾಗೂ ಯಾರ್ಯಾರಿಗೆ benefit ಬರುತ್ತದೆ ಅದನ್ನು ಮಾಡಿಕೊಳ್ಳಬಹುದು. ಅದನ್ನು instructions ಕೊಟ್ಟಿದ್ದೇನೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ (ಶಿರಾ) : Clarification ಇವತ್ತೇ ಇಶ್ಯೂ ಆಗಬೇಕು. ಏಕೆಂದರೆ, ತಾಲ್ಲೂಕು ಆಫೀಸ್‌ಗಳಲ್ಲಿ ನಾನಾ ರೀತಿಯಲ್ಲಿ ವ್ಯಾಖ್ಯಾನ ಮಾಡುತ್ತಾರೆ.

(ಗೊಂದಲ)

ಶ್ರೀ ಜಿ. ಕರುಣಾಕರ ರೆಡ್ಡಿ : ಇವತ್ತೇ ಇಶ್ಯೂ ಮಾಡಿಸಿಕೊಡುತ್ತೇನೆ.

ಗಮನ ಸೆಳೆಯುವ ಸೂಚನೆ :

(1) : ಡಾ: ಡಿ.ಎಂ.ನಂಜುಂಡಪ್ಪರವರ ಪ್ರಾದೇಶಿಕ ವರದಿಯನ್ನಾಧರಿಸಿ 2009–10ನೇ ಸಾಲಿನ ಆಯವ್ಯಯದಲ್ಲಿ ನಿಗದಿಪಡಿಸಿದ ಅನುದಾನ ಹಾಗೂ ವೆಚ್ಚ ಮಾಡಿದ ಅನುದಾನದ ಬಗ್ಗೆ

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ (ಕುಷ್ಟಗಿ) : ಸನ್ಮಾನ್ಯ ಅಧ್ಯಕ್ಷರೆ, ನಾನು ಈ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯ ಬೇಕೆಂದುಕೊಂಡಿದ್ದೆ. ಆದರೆ, ಸಣ್ಣ ನೀರಾವರಿ ಮತ್ತು ಯೋಜನೆ ಸಚಿವರಿಗೆ

ಈ ಒಂದು ಡಾ: ಡಿ.ಎಂ. ನಂಜುಂಡಪ್ಪನವರ ಪ್ರಾದೇಶಿಕ ವರದಿಯನ್ನಾಧರಿಸಿ 2009–10ನೇ ಸಾಲಿನ ಆಯವ್ಯಯದಲ್ಲಿ ನಿಗದಿಪಡಿಸಿದ ಅನುದಾನ ಹಾಗೂ ವೆಚ್ಚ ಮಾಡಿದ ಅನುದಾನದ ಬಗ್ಗೆ ಮಾಹಿತಿ ಕೊಡಬೇಕೆಂದು ತಮ್ಮ ಗಮನ ಸೆಳೆಯುತ್ತೇನೆ.

ಅಧ್ಯಕ್ಷರು : ಮಾನ್ಯ ಸಚಿವರಾದ ಗೋವಿಂದ ಕಾರಜೋಳರವರು ಈಗ ಸದನದಲ್ಲಿ ಹಾಜರಿಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಉದಾಸಿಯವರು ವಿಧಾನ ಪರಿಷತ್ತಿನಲ್ಲಿದ್ದಾರೆ. ನಂತರ ಬರುತ್ತಾರೆ.

ಅಧ್ಯಕ್ಷರು : ಈ ವಿಷಯವನ್ನು ಆಮೇಲೆ ತೆಗೆದುಕೊಂಡು ಚರ್ಚಿಸೋಣ. ಮಾನ್ಯ ಮಂತ್ರಿಗಳು ಬಂದ ನಂತರ ಈ ವಿಷಯವನ್ನು ತೆಗೆದುಕೊಳ್ಳೋಣ.

(2) ಹಾಸನ ಜಿಲ್ಲೆಯ ಆಲೂಗೆಡ್ಡೆ ಬೆಳೆಯುವ ರೈತರು ಸಂಕಷ್ಟದಲ್ಲಿದ್ದು ಅವರಿಗೆ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜವನ್ನು ನೀಡುವ ಬಗ್ಗೆ.

ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ) : ಹಾಸನ ಜಿಲ್ಲೆಯ ಆಲೂಗೆಡ್ಡೆ ಬೆಳೆಯುವ ರೈತರು ಸಂಕಷ್ಟದಲ್ಲಿದ್ದು ಅವರಿಗೆ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜವನ್ನು ನೀಡುವ ಬಗ್ಗೆ ಮಾನ್ಯ ತೋಟಗಾರಿಕೆ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಉಮೇಶ್ ವಿ.ಕತ್ತಿ (ತೋಟಗಾರಿಕಾ ಸಚಿವರು) : ಮಾನ್ಯ ಅಧ್ಯಕ್ಷರೆ, ಹಾಸನ ಜಿಲ್ಲೆಯಲ್ಲಿ ಪ್ರತಿ ವರ್ಷ ಸುಮಾರು 45,000 ಮೆಟ್ರಿಕ್ ಟನ್ಸ್ ಬಿತ್ತನೆ ಬೀಜದ ಅವಶ್ಯಕತೆ ಇದ್ದು 45,000 ಹೆಕ್ಟೇರ್ ಪ್ರದೇಶದಲ್ಲಿ ಆಲೂಗಡ್ಡೆಯನ್ನು ಬೆಳೆಯುತ್ತಿದ್ದಾರೆ. ಆಲೂಗಡ್ಡೆ ಬೆಳೆಯು ಅಂಗಮಾರಿ ರೋಗಕ್ಕೆ ತಗಲಿ ರೈತರಿಗೆ ಆರ್ಥಿಕ ನಷ್ಟ ಉಂಟಾಗಿದ್ದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಅಂಗಮಾರಿ ರೋಗ, ಇದೇ ಬೆಳೆಯನ್ನು ಮೇಲಿಂದ ಮೇಲೆ ಬೆಳೆಯುವುದರಿಂದ ಕಾಣಿಸಿಕೊಳ್ಳುತ್ತಿದೆ. ಆದ್ದರಿಂದ ರೈತರಿಗೆ ಪರ್ಯಾಯ ಬೆಳೆಯನ್ನು ಬೆಳೆಯುವ ಬಗ್ಗೆ ಇಲಾಖೆ ವತಿಯಿಂದ ತಿಳುವಳಿಕೆ ನೀಡಲಾಗುತ್ತದೆ.

ಬಿತ್ತನೆ ಬೀಜದ ದೋಷದಿಂದಲೂ ಅಂಗಮಾರಿ ರೋಗ ಬರುತ್ತದೆ ಎಂಬ ದೂರು ರೈತರಿಂದ ಬಂದಿರುತ್ತದೆ. ಆದ್ದರಿಂದ ಪ್ರಸ್ತುತ 2010–11